# ಸ್ವಿಝುರ್‌ಲ್ಯಾಂಡ್‌ನ ಕೂಲ್ ಹುಡುಗಿಯ ಆಯುರ್ವೇದ ಸಾಧನೆ



ಮೂಡುಬಿದಿರೆ : ರಾಜೀವಗಾಂಧಿ ಆರೋಗ್ಯ ವಿ.ವಿ ಆಶ್ರಯದಲ್ಲಿರುವ ಮೂಡುಬಿದಿರೆ ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಭಾರತೀಯ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಯನ್ನು ಸ್ವಿಝುರ್‌ಲ್ಯಾಂಡ್‌ನ ಕೂಲ್ ಹುಡುಗಿ ಕ್ಯಾರೋಲ್ ಝಿನ್ಸೆಲ್ ಎಂಬಾಕೆ ನಾಲ್ಕುವರೆ ವರ್ಷಗಳ ಅವಧಿಯ ಆಯುರ್ವೇದ ವೈದ್ಯಕೀಯ ಶಿಕ್ಷಣ (ಬಿ.ಎ.ಎಂ.ಎಸ್) ಪದವಿಯನ್ನು 71% ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣವಾಗುವ ಮೂಲಕ ಹೊಸತೊಂದು ದಾಖಲೆ ಸೃಷ್ಟಿಸಿದ್ದಾಳೆ.

ರಾಜೀವಗಾಂಧಿ ವಿ.ವಿಯಲ್ಲಿ ಮೊತ್ತ ಮೊದಲ ಬಾರಿ ಸ್ವಿಝುರ್‌ಲ್ಯಾಂಡ್‌ನ ಯುವತಿಯೋರ್ವಳು ಶಿಕ್ಷಣ ಪಡೆದ ಹೆಗ್ಗಳಿಕೆ ಇದಾಗಿದೆ. ಈ ಹೆಗ್ಗಳಿಕೆಗೆ ಮೂಡುಬಿದಿರೆ ಆಳ್ವಾಸ್ ಕಾಲೇಜು ಪಾತ್ರವಾಗಿದೆ. ಸೆ. 28, 2006ರಲ್ಲಿ ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜಿಗೆ ಬಿ.ಎ.ಎಂ.ಎಸ್ ಪದವಿಗಾಗಿ ಕ್ಯಾರೋಲ್ ಸೇರ್ಪಡೆಗೊಂಡಿದ್ದಳು. ಇದೀಗ ನಾಲ್ಕೂವರೆ ವರ್ಷಗಳ ಬಿ.ಎ.ಎಂ.ಎಸ್ ಪದವಿಯನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದ್ದು ಈಕೆಯ ಹೆಗ್ಗಳಿಕೆ ಶಿಕಣದ ಮೇಲಿನ ಈಕೆಯ ಮಮತೆ ಇದನ್ನು ತೋರುಸುತ್ತಿದೆ.

ವಿರಾಸತ್ ಪ್ರೇರಣೆ: ಕ್ಯಾರೋಲ್ ಆಳ್ವಾಸ್ ಶಿಕ್ಷಣ ಸಂಸ್ಥೆಯನ್ನು ಆಯ್ಕೆ ಮಾಡಲು ಪ್ರಮುಖ ಕಾರಣ ಆಕೆಯ ತಾಯಿಯ ಗೆಳತಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಪ್ರಾಯೋಜಿಸುತ್ತಿರುವ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಆಳ್ವಾಸ್ ವಿರಾಸತ್‌ನ ಸೊಬಗನ್ನು ಕಣ್ಣು ತುಂಬಿಸಿಕೊಂಡ ಕ್ಯಾರೋಲ್‌ನ ತಾಯಿ ಆಕೆಯನ್ನು ಈ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗಕ್ಕಾಗಿ ಕಳುಹಿಸಿದರು.

ಆಳ್ವಾಸ್ ಸಮೂಹ ಸಂಸ್ಥೆಗಳ ಆಶ್ರಯದಲ್ಲಿರುವ ಶೋಭಾವನ, ಆಳ್ವಾಸ್ ಫಾರ್ಮಸಿ, ಅತ್ಯಂತ ಸಾಂಪ್ರದಾಯಿಕ ರೀತಿಯ ಔಷಧಿ ತಯಾರಿಕಾ ಘಟಕ, ಶಿಕ್ಷಣದ ಗುಣಮಟ್ಟ, ಶಿಸ್ತುಬದ್ಧ ನಡತೆಗಳು ಕ್ಯಾರೋಲ್ ಅವರ ಕುಟುಂಬಿಕರನ್ನು ಆಳ್ವಾಸ್ ಸಂಸ್ಥೆಯತ್ತ ಆಕರ್ಷಿಸುವಂತೆ ಮಾಡಿತು. ಅದರ ಫಲವೇ ಕ್ಯಾರೋಲ್ ನಾಲ್ಕೂವರೆ ವರ್ಷದ ಶಿಕ್ಷಣವನ್ನು ಒಂದು ತಪಸ್ಸು ಎಂಬಂತೆ ಪೂರೈಸಿದ್ದಾಳೆ. "ಭಾರತ ದೇಶದ ಸಂಪ್ರದಾಯ, ದೇಶೀಯತೆ, ಭಾಷಾ ವೈವಿಧ್ಯತೆ, ಉಡುಗೆ ತೊಡುಗೆ, ಸಂಸ್ಕೃತಿಯ ಬಗೆಗೆ ನನಗೆ ಅಪಾರವಾದ ಅಭಿಮಾನವಿದೆ. ಇಲ್ಲಿನ ಶಿಕ್ಷಣದ ಗುಣಮಟ್ಟವೂ ಅತ್ಯಂತ ಉತ್ಕೃಷ್ಟವಾದುದು ಈ ಕಾರಣಕ್ಕೆ ನಾನು ಭಾರತವನ್ನು ಶಿಕ್ಷಣಕ್ಕಾಗಿ ಆಯ್ಕೆಗೊಳಿಸಿದೆ. ಅದರಲ್ಲೂ ಮೂಡುಬಿದಿರೆಯೆಂಬ ಒಂದು ಪುಟ್ಟ ಪ್ರದೇಶ ಅದ್ಭುತವಾದ ಗುಣಲಕ್ಷಣವನ್ನು ಹೊಂದಿದೆ. ಇಲ್ಲಿನ ಪ್ರತಿಯೊಂದು ಕ್ರಿಯೆಗಳು ಸಹ ವಿಶೇಷವಾದುದು, ಇಲ್ಲಿ ಶಿಕ್ಷಣ ಪಡೆಯುವ ಭಾಗ್ಯ ನನಗೆ ದೊರಕಿದ್ದು ನನ್ನ ಪುಣ್ಯ ಮುಂದೆಯೂ ಕರ್ನಾಟಕದಲ್ಲಿಯೇ ಮಾಸ್ಟರ್ ಡಿಗ್ರಿಯನ್ನು ಮಾಡುತ್ತೇನೆ" ಎಂದು ಅಂತರಾಳದ ಮಾತುಗಳನ್ನು ಕ್ಯಾರೋಲ್ ಹೇಳುತ್ತಿದ್ದಾರೆ.

ಆಯುರ್ವೇದದ ಇತಿಹಾಸ, ಸಂಸ್ಕೃತ ಭಾಷೆ ಇವೆಲ್ಲವುಗಳ ಅಧ್ಯಯನ ಆಕೆಗೆ ಯಾವುದೇ ತೊಡಕನ್ನುಂಟು ಮಾಡಿಲ್ಲ. ಇತರ ವಿದ್ಯಾರ್ಥಿಗಳಂತೆಯೇ ಅತ್ಯಂತ ಲವಲವಿಕೆಯಿಂದಲೇ ಈ ಎಲ್ಲಾ ವಿಚಾರಗಳ ಸೂಕ್ಷ್ಮಾಧ್ಯಯನವನ್ನು ಅತ್ಯಂತ ಕಾಳಜಿಯಿಂದ ಮುತುವರ್ಜಿಯಿಂದ ಕ್ಯಾರೋಲ್ ಪೂರೈಸಿದ್ದಾಳೆ.

ಈ ಭಾಗದ ಎಲ್ಲಾ ತೊಂದರೆಗಳ ಬಗ್ಗೆ ನನಗೇನೂ ಬೇಸರವಾಗಿಲ್ಲ. ನನಗೆ ಬೇಕೆಂದು ಇಲ್ಲಿನ ಹವಾಮಾನದ ಬದಲಾವಣೆಯೂ ಸಾಧ್ಯವಿಲ್ಲ. ಇವೆಲ್ಲವುಗಳನ್ನು ಒಪ್ಪಿ ನಾನು ಈ ದೇಶಕ್ಕೆ ಬಂದಿದ್ದೇನೆ ಹೊಂದಿಕೊಂಡು ಹೋಗುವುದು ನನ್ನ ಕರ್ತವ್ಯ ಎಂಬ ಆಕೆಯ ನುಡಿಗಳು ಆಕೆಯ ಬದ್ಧತೆಗೆ ಒಂದು ನಿದರ್ಶನವಾಗಿತ್ತು.

(ಈ ಬಗ್ಗೆ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ। ಎಂ. ಮೋಹನ ಆಳ್ವ ಹರ್ಷ ವ್ಯಕ್ತಪಡಿಸಿ ಸ್ವಿಝುರ್‌ಲ್ಯಾಂಡ್‌ನ ಹುಡುಗಿ ನಮ್ಮ ದೇಶಕ್ಕೆ ಬಂದು ಇಲ್ಲಿನ ಸಂಸ್ಕೃತಿಯನ್ನು ತನ್ನಲ್ಲಿ ಅಳವಡಿಸಿಕೊಂಡು ಉತ್ತಮ ಶಿಕ್ಷಣವನ್ನು ಪಡೆದು ಸಂಸ್ಥೆಗೆ ಹೆಸರನ್ನು ತಂದಿದ್ದಾಳೆ ಎಂದ ಅವರು ಕ್ಯಾರೋಲ್ ಬಗ್ಗೆ ಮೊದ ಮೊದಲಿಗೆ ಸ್ವಲ್ಪ ಭಯವಿತ್ತು ಆಕೆ ಸಂಸ್ಕೃತವನ್ನು ಕಲಿಯಬಲ್ಲಲೇ ಎಂದು ಆದರೆ ಆಕೆ ಇವೆಲ್ಲವನ್ನು ಮೀರಿ ನಿಂತಿದ್ದಾಳೆ. ಇಲ್ಲಿನ ಇಲ್ಲಿನ ಹವಾಮಾನಕ್ಕೂ ಹೊಂದಿಕೊಂಡಿದ್ದಾಳೆ ಆಕೆ ನಾಲ್ಕು ವರ್ಷದ ಹಿಂದೆ ಈ ಸಂಸ್ಥೆಗೆ ಬಂದಿದ್ದರೂ ಯಾವುದೇ ಕಿರಿಕ್ ಇಲ್ಲದೆ ಎಲ್ಲಾ ವಿದ್ಯಾರ್ಥಿ, ಉಪನ್ಯಾಸಕರ ಜತೆ ಹೊಂದಿಕೊಂಡಿದ್ದಾಳೆ ಆಕೆ ಒಳ್ಳೆಯ ಹುಡುಗಿ ಎಂದು ಅಭಿಪ್ರಾಯಪಟ್ಟಿದ್ದಾರೆ.)